ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಇಪ್ಪೈ ಟೈಪು ಅಂತ ಹೇಳುವುದಕಾಗುವುದಿಲ್ಲ. ಇದನ್ನು ೧೯೮೧–೮೨ರ ಸಾಲಿನಲ್ಲಿ ತೆಗೆದುಕೊಂಡು ಮಾಡಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ವಿ. ಎಂ. ಭಾಡಿ.—ಷ್ಟಾನ್, ಎಸ್ಟಿಮೇಟ್ ಆಗಿದೆಯಾ ಹೇಳಿದಿರಿ ಎಷ್ಟು ದುಡ್ಡನ್ನು ಇದಕ್ಕಾಗಿ ಇಡಲಾಗಿದೆಯೆಂಬುದನ್ನು ಹೇಳುತ್ತೀರಾ ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಆ ಶಾಲೆಗೆ ೫ ಕೊಠಡಿಗಳು ಬೇಕಾಗಿರುವುದರಿಂದ ಅದಕ್ಕೆ ಬೇಕಾಗುವಷ್ಟು ಹಣವನ್ನು ಕೊಡುತ್ತೇವೆ, ಕೊಟ್ಟು ಆ ಕೆಲಸವನ್ನು ಮಾಡಿಸಿಕೊಡುತ್ತೇನೆ,

Sanction of Primary Schools for Mudigere Constituency.

629. SMT. MOTAMMA (Mudigere).—Will the Minister of State for Primary and Secondary Education be pleased to state.—

(a) the number of Primary School sanctioned to the Mudigere Constituency;

(b) whether the school have been sanctioned for the convenience tos tudents coming from the Rural and Remote areas of Village. Labourers and S.C.;

(c) the names of these place;

(d) whether it has come to notice of the Government that the Mudigere Government Girls High School is without a Head Mistress ince lest two years;

(e) whether the Government will take any action in this behalf ?

SMT NAGAMMA C. KESHAVAMURTHY (Minister for Primary and Secondy Education). —

(a) 177.

(b) The Policy of the Government is to sanction one school for every village where the population is 300 as per the compulsory education rules.

(c) This question does not arise.

(d) Yes.

(e) The Government has already taken action in this behalf.

ಶ್ರೀಮತಿ ಮೋಟಮ್ಮ.—(ಅ)ಗೆ ಉತ್ತರವಾಗಿ ಸರ್ಕಾರದ ನೀತಿಯನ್ನು ಹೇಳಿದ್ದೀರಿ, ನಾನು ಸರ್ಕಾರದ ನೀತಿಯನ್ನು ಕೇಳಲಿಲ್ಲ. ಹರಿಜನರು ಮತ್ತು ಕೂಲಿಗಾರರು ಇರತಕ್ಕಂಥ ಜಾಗದಲ್ಲಿ ಅವರಿಗೆ ಒಂದು ನೀತಿಯಲ್ಲಿ ಪ್ರೋತ್ಸಾಹವನ್ನು ಕೊಡುವ ದೃಷ್ಟಿಯಿಂದ, ಅವರಿಗೆ ಅನುಕೂಲವಾಗುವ ದೃಷ್ಟಿಯಿಂದ ಅಂಥಾ ಜಾಗಗಳಲ್ಲಿ ಶಾಲೆಯನ್ನು ತೆರೆಯುತ್ತೀರಾ ಎಂದು ಪ್ರಶ್ನೆ ಕೇಳುತ್ತಿದ್ದೇನೆ.

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಈಗ ನಾವು ಹಾಕಿರುವ ನಾರ್ಮಸ್ ಪ್ರಕಾರ ೩೦೦ ಜನಸಂಖ್ಯೆ ಇರುವಂಥಾ ಕಡೆಗಳಲ್ಲಿ ಶಾಲೆಗಳನ್ನು ಶುರು ಮಾಡುವುದಿಲ್ಲ. ಹರಿಜನರು ಮತ್ತು ಕೂಲಿಗಾರರ ಮಕ್ಕಳಿಗಾಗಿ ಈ ನಾರ್ಮಸ್‌ನ್ನು ಬಿಟ್ಟು ಶಾಲೆಯನ್ನು ಶುರು ಮಾಡುವುದಕ್ಕಾಗುವುದಿಲ್ಲ.

ಶ್ರೀಮತಿ ಮೋಟಮ್ಮ.—ಇಲ್ಲಿ ನಾರಂಸ್ ಪ್ರಶ್ನೆ ಬರುವುದಿಲ್ಲ. ಅವರಿಗೆ ಒಂದು ರೀತಿಯಾದ ಉತ್ತೇಜನವನ್ನು ಕೊಡುವ ದೃಷ್ಟಿಯಿಂದ ಮತ್ತು ಅವರು ಇರತಕ್ಕಂಥ ಕಾಲೋನಿಗಳಲ್ಲಿಯೇ ಒಂದೊಂದು ಶಾಲೆಯನ್ನು ಪ್ರಾರಂಭ ಮಾಡುವುದರಿಂದ ಅವರನ್ನು ಆಕರ್ಷಣೆ ಮಾಡಿದ ಹಾಗಾಗುತ್ತದೆ. ಇದರಿಂದ ಏತಕ್ಕೆ ಅವರಿಗಾಗಿ ಈ ನಿಮ್ಮ ರೂಲ್ ನ್ನು ರಿಲ್ಯಾಕ್ಸ್ ಮಾಡಿಮಾಡಬಾರದೆಂದು ಕೇಳುತ್ತಿದ್ದೇನೆ.

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಒಂದು ಶಾಲೆಯನ್ನು ಶುರು ಮಾಡಬೇಕಾದರೆ ೩೦೦ ಜನಸಂಖ್ಯೆ ಇರಲೇಬೇಕೆಂದು ಇದೆ. ೪೦ ಮಕ್ಕಳು ಒಂದೇ ಏಜ್‌ಗ್ರೂಪಿನವರು ಬರುವ ಹಾಕಿದ್ದರೆ ಅಂಥಾ ಕಡೆ ನಮ್ಮ ರೂಲ್ಸ್‌ನ್ನು ಸ್ವಲ್ಪ ರಿಲ್ಯಾಕ್ಸ್ ಮಾಡಿ ಮಾಡುವುದಕ್ಕೆ ಆಗುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರುಗಳ ಅಭಿಪ್ರಾಯವೇನೆಂದರೆ, ಪ್ಲಾಂಟೇಷನ್ ಮತ್ತು ದೊಡ್ಡ ದೊಡ್ಡ ತೋಟ ಇರುವಂಥಾ ಕಡೆಗಳಲ್ಲಿ ಲೇಬರರ್ಸ್ ಮತ್ತು ಹರಿಜನ ಮಕ್ಕಳಿರುತ್ತಾರೆ, ಅಂಥವರು ಇರುವ ಕಡೆ ಏನಾದರೂ ಶಾಲೆಯನ್ನು ತೆರೆಯುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಎಂದು.

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಈ ವರ್ಷ ನಾವು ಹರಿಜನಮಕ್ಕಳು ಇರುವಂಥಾ ಕಡೆಯಲ್ಲಿ ಆದ್ಯತೆ ಕೊಟ್ಟು ಆದಷ್ಟು ಶಾಲೆಗಳನ್ನು ಶುರು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ಗಂಗಣ್ಣ.—ಸ್ವಾಮಿ, ೩೦೦ ಜನಸಂಖ್ಯೆ ಇರುವ ಕಡೆ ಒಂದು ಶಾಲೆಯನ್ನು ಸರ್ಕಾರದವರು ಕೊಡುವುದಾಗಿ ತಿಳಿಸುತ್ತಿದ್ದಾರೆ. ನಮ್ಮ ಸರ್ಕಾರದ ನೀತಿಯ ಪ್ರಕಾರ ಕುಟುಂಬ ಕಲ್ಯಾಣ ಯೋಜನೆಯನ್ನು ಜಾರಿಗೆ ತರುತ್ತಿರುವಾಗ ೩೦೦ ಜನ ಇರುವ ಕಡೆ ಶಾಲೆಯನ್ನು ಕೊಡುತ್ತೇವೆಂದು ಹೇಳಿದರೆ ಆಗ ಕಂಪಲ್ಸರಿಯಾಗಿ ಅಷ್ಟೊಂದು ಜನಸಂಖ್ಯೆಯನ್ನು ಹೊಂದಿರಬೇಕಾಗುತ್ತದೆ ಇದು ನಮ್ಮ ಸರ್ಕಾರದ ನೀತಿಗೆ ವಿರುದ್ಧವಾಗುವುದಿಲ್ಲವೇ ? ಆದುದರಿಂದ ಪ್ರತಿಯೊಂದು ಹಳ್ಳಿಯಲ್ಲೂ ಎಷ್ಟೇ ಜನಸಂಖ್ಯೆ ಇರಲಿ ಅಲ್ಲಿಗೆಲ್ಲಾ ಕಂಪಲ್ಸರಿಯಾಗಿ ಪ್ರಾಥಮಿಕ ಶಾಲೆಗಳನ್ನು ತೆರೆಯುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಅಧ್ಯಕ್ಷರು.—ಇದು ಹೈಪಾತಿಟಿಕಲ್ ಕ್ವೆಶ್ಚನ್.

ಶ್ರೀಮತಿ ಮೋಟಮ್ಮ.—ಮೂಡಿಗೆರೆ ಸರ್ಕಾರಿ ಬಾಲಕಿಯರ ಶಾಲೆಗೆ ಹೆಡ್‌ಮಿಸ್ಟ್ರೆಸ್‌ನ್ನು ಹಾಕದೇ ಇರುವುದಕ್ಕೆ ಕಾರಣವೇನು ಎಂಬುದನ್ನು ಹೇಳುತ್ತೀರಾ ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಅಲ್ಲಿಗೆ ೨ ವರ್ಷಗಳಿಂದ ಏತಕ್ಕೆ ಪೋಸ್ಟ್ ಮಾಡಿರಲಿಲ್ಲ ಎನ್ನುವುದು ಬೇರೆ ವಿಚಾರವಾಗುತ್ತದೆ. ಆದರೆ ಈಗ ಅಲ್ಲಿಗೆ ಶ್ರೀಮತಿ ವೀಣಾ ಆರ್ ನಾಯುಡು ಎನ್ನುವವರೊಬ್ಬರನ್ನು ದಿ : ೯-೨-೮೧ರಂದು ಪೋಸ್ಟ್ ಮಾಡಿದ್ದೇವೆ ಅವರು ಈಗಾಗಲೇ ಅಲ್ಲಿ ಚಾರ್ಜ್ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ.

ಶ್ರೀಮತಿ ಮೋಟಮ್ಮ.—ಇದುವರೆವಿಗೂ ಪೋಸ್ಟ್ ಮಾಡದೇ ಇರುವುದಕ್ಕೆ ಕಾರಣವೇನು ? ಮತ್ತು ಮುಂದೆ ಆ ರೀತಿ ಆಗದೇ ಇರುವ ಹಾಗೇ ನೋಡಿಕೊಳ್ಳುತ್ತೀರಾ ?

ಅಧ್ಯಕ್ಷರು.—ಆ ಪ್ರಶ್ನೆ ಉದ್ಭವವಾಗುವುದಿಲ್ಲ. ಆಲ್ಲಿಗೆ ಆಗಲೇ ಪೋಸ್ಟ್ ಮಾಡಿದ್ದಾರಲ್ಲಾ.

Cocoon Markets existing in Mysore Sericulture Seed area

693 SRI D. T. MAYANNA (Huliyuradurga) —Will the Minister for Small Scale Industries and Sericulture be pleased to state.—

(a) the number of Silk Markets in the Mysore breed silk growing area ;

(b) the number of markets are in rented buildings ;

(c) the particulars of rent paid to these markets and the total amount paid (details for the last 5 years ;